ದಿನಾಂಕ:**10.03.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ C.S. ವಕೀಲರಿಂದ:**

ಸಾಕ್ಷಿಗೆ ನಿಡಿ-5 ನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ಮೂಕನಹಳ್ಳಿ ಗ್ರಾಮ ಪಂಚಾಯಿತಿ ಎಂದು ಕಾಣಿಸುತ್ತಿದೆ ಎಂದರೆ ಸರಿ. ಮೂಕನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಸ್ವತ್ತಿಗೆ ನಾನು ಈ ದಾವೆ ಹೂಡಿರುವುದು ಎಂದರೆ ಸರಿ. ನಾನು ವೃತ್ತಿಯಲ್ಲಿ ಪೊಲೀಸ್ ಆಗಿದ್ದೆ ಎಂದರೆ ಸರಿ.

ದಾವಾ ಆಸ್ತಿಯ ಪಶ್ಚಿಮಕ್ಕೆ ನಮ್ಮ ಜಾಗ ಎಂದು ಹೇಳಿದ್ದು, ಸದರಿ ಜಾಗದ ಜಂಜರ್ ನಂಬರ್ ಏನು ಎಂದರೆ ಸಾಕ್ಷಿ ಅದು ಸದರಿ ಸ್ವತ್ತಿನ ಮುಂದುವರೆದ ಭಾಗ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಜಂಜರ್ ನಂ.115, ಆಸ್ತಿ ಸಂ.65. ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿ ಪೂರ್ವ-ಪಶ್ಚಿಮ 30 ಮತ್ತು ಉತ್ತರ-ದಕ್ಷಿಣ 30 ಎಂದು ನುಡಿಯುತ್ತಾರೆ. ಜಂಜರ್ ನಂ.115, ಆಸ್ತಿ ಸಂ.65 ರ 30X30 ರಲ್ಲಿ ನೀವು ಸ್ವಾಧೀನ ಇರುವ ಬಗ್ಗೆ ಡಿಮಾಂಡ್ ರೆಜಿಸ್ಟ್ರ ನ್ನು ಹಾಜರುಪಡಿಸಿರುತ್ತೇನೆ.

ಜಂಜರ್ ನಂ.214, ಆಸ್ತಿ ಸಂ.305 ರಲ್ಲಿ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ನನಗೆ ಸೇರಿದ ಜಾಗ ಎಂದು ಹೇಳಿದ್ದು ಒಟ್ಟು ವಿಸ್ತೀರ್ಣ ಎಷ್ಟು ಬರುತ್ತದೆ ಎಂದರೆ ಸಾಕ್ಷಿ 30X40 ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ನಮ್ಮ ಜಾಗ ಎಂದು ಹೇಳಿದ್ದು, ಅದು ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ 10 ಅಡಿ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಹೆಸರಿನಲ್ಲಿ ಮೂಕನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು ಎಷ್ಟು ನಿವೇಶನ ಇರುತ್ತವೆ ಎಂದರೆ ಸಾಕ್ಷಿ ಒಂದು ನಿವೇಶನ ಮತ್ತು ಒಂದು ಮನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ಶೀಟಿನ ಮನೆ ನಿಮ್ಮದಾ ಎಂದರೆ ಸಾಕ್ಷಿ ಅದರ ಹಿಂದೆ ಇರುವ ಕೆಂಪು ಹೆಂಚಿನ ಮನೆ ನಮ್ಮದು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು **ನಿಡಿ-6** ಎಂದು ಗುರುತಿಸಲಾಯಿತು. ಶೀಟಿನ ಮನೆ ಯಾರದ್ದು ಎಂದರೆ ಸಾಕ್ಷಿ ಕೆಂಪರಾಜು ಎಂದು ನುಡಿಯುತ್ತಾರೆ. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿದ್ದು, ಸದರಿ ಭಾವಚಿತ್ರವನ್ನು ದಾವಾ ಸ್ವತ್ತಿನ ಪೂರ್ವಾಭಿಮುಖವಾಗಿ

ತೆಗೆದಿರುವ ಭಾವಚಿತ್ರ ಎಂದರೆ ಹೌದು. ಸದರಿ ಭಾವಚಿತ್ರವನ್ನು **ನಿಡಿ-7** ಎಂದು ಗುರುತಿಸಲಾಯಿತು. ನಿಡಿ-7 ರಲ್ಲಿ ನಿವೇಶನದ ಮೂರು ದಿಕ್ಕಿಗೂ ರಸ್ತೆ ಇದೆ ಎಂದರೆ ಸಾಕ್ಷಿ ಎರಡು ಕಡೆ ರಸ್ತೆ ಇರುತ್ತದೆ, ನಮ್ಮ ಮನೆ ತಲುಪಲು ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ತಲುಪಲು ಜಾಗ ಎಂದು ಹೇಳಿದ್ದು, ಪಂಚಾಯಿತಿಯವರು ದಿಃ 14.11.2016 ರಂದು ಸಭೆ ಮಾಡಿ ನಿಮ್ಮ ಮನೆ ತಲುಪಲು 6 ಅಡಿ ಜಾಗವನ್ನು ಬಿಟ್ಟುಕೊಟ್ಟಿರುವ ಜಾಗ ಎಂದರೆ ಸರಿ. ಸದರಿ ಪಂಚಾಯಿತಿಯ ನಡಾವಳಿಯ ಆದೇಶದ ದೃಢೀಕೃತ ಪ್ರತಿಯನ್ನು ಸಾಕ್ಷಿಗೆ ತೋರಿಸಿದ್ದು ಹೌದು ಎಂದು ಒಪ್ಪಿದ ಮೇರೆಗೆ **ನಿಡಿ-8** ಎಂದು ಗುರುತಿಸಲಾಯಿತು.

ದಾವಾ ಸ್ವತ್ತು ಮೂಕನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ್ದು, ಸದರಿ ಜಾಗದಲ್ಲಿ ಜಾನುವಾರುಗಳಿಗೆ ನೀರು ಕುಡಿಯುವ ಸಲುವಾಗಿ 30 ವರ್ಷಗಳ ಹಿಂದೆ ಟ್ಯಾಂಕ್ ನಿರ್ಮಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆಯ ಅನುಮತಿ ಪಡೆದು ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆ ಮೌಖಿಕವಾಗಿ ಅನುಮತಿ ನೀಡಿದ್ದು, ಅದರ ಬಗ್ಗೆ ಲಿಖಿತ ಅನುಮತಿ ಇರುವುದಿಲ್ಲ. ಸದರಿ ಬಗ್ಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ, ದಾವಾ ಸ್ವತ್ತಿನ ಮೇಲೆ ನನಗಾಗಲೀ, ನನ್ನ ತಂದೆಗಾಗಲೀ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

2016 ರಲ್ಲಿ ಏಕಾಏಕಿಯಾಗಿ ಗುಂಪು ಕಟ್ಟಿಕೊಂಡು ದಾವಾ ಸ್ವತ್ತಿನಲ್ಲಿರುವ ಟ್ಯಾಂಕ್ ನ್ನು ಒಡೆದುಹಾಕಲು ಪ್ರಯತ್ನಪಟ್ಟಿದ್ದು, ಪ್ರತಿವಾದಿಗಳು ಅದನ್ನು ತಡೆದರು ಎಂದರೆ ಸುಳ್ಳು. ಸದರಿ ಸಂದರ್ಭದಲ್ಲಿ 1 ನೇ ಪ್ರತಿವಾದಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದರು ಎಂದರೆ ಸರಿ. ಪ್ರತಿವಾದಿಗಳು ತಡೆದಿದ್ದರಿಂದ ನಿಮ್ಮ ತಂದೆ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಸುಳ್ಳು ದೂರನ್ನು ನೀಡಿದ್ದರು ಎಂದರೆ ಸಾಕ್ಷಿ ನಮಗೆ ಅಡ್ಡಿಪಡಿಸಿದ ಕಾರಣ ದೂರನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ಯಾವ ಚೆಕ್ಕುಬಂಧಿಯ ಒಳಗಡೆ ಬರುತ್ತದೆಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-1 ಯಾವ ಚೆಕ್ಕುಬಂಧಿಯ ಒಳಗಡೆ ಬರುತ್ತದೆಂದು ತೋರಿಸಲು ದಾಖಲಾತಿ ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಮಾಲೀಕರಿಗೆ ಈ-ಸ್ವತ್ತನ್ನು ನೀಡುತ್ತಾರೆಂದರೆ ಸರಿ. ಆ ಸಂದರ್ಭದಲ್ಲಿ ಮಾಲೀಕರ ಭಾವಚಿತ್ರ ಮತ್ತು

ಚೆಕ್ಕುಬಂಧಿಯನ್ನು ಪರಶೀಲಿಸಿ ಈ-ಸ್ವತ್ತನ್ನು ನೀಡುತ್ತಾರೆಂದರೆ ಸರಿ. ಯಾರು ಮಾಲೀಕರಲ್ಲ ಅವರಿಗೆ 11(ಎ) ಅಥವಾ 11(ಬಿ) ಯನ್ನು ನೀಡುವುದಿಲ್ಲ ಎಂದರೆ ಸರಿ. ನಮಗೆ 11(ಎ) ಅಥವಾ 11(ಬಿ) ಯನ್ನು ಪಂಚಾಯಿತಿಯವರು ನೀಡಿರುವುದಿಲ್ಲ. ಮುಂದುವರೆದು ನಮ್ಮ ತಾಯಿ ಅರ್ಜಿ ಹಾಕಿದ್ದರು, ಆದರೆ ಪಂಚಾಯಿತಿಯವರು ನೀಡಿರುವುದಿಲ್ಲ, ಸದರಿ ಬಗ್ಗೆ ದಾಖಲಾತಿ ಇದೆ ಎಂದು ನುಡಿಯುತ್ತಾರೆ.

ನಿಪಿ-2 ಮತ್ತು 3 ಯಾವ ಸ್ವತ್ತಿಗೆ ಸಂಬಂಧಿಸಿದ್ದು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನಿಮ್ಮ ಕುಟುಂಬದವರು ಯಾವುದೇ ಕಾಲದಲ್ಲೂ ಸ್ವಾಧೀನ ಇರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀನೆಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಅಂಬೇಡ್ಕರ ಭವನವನ್ನು ನಿರ್ಮಿಸುವಂತೆ ಸರ್ಕಾರದಿಂದ ಆದೇಶ ಬಂದಿದೆ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.